**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

ಅಸಲು ದಾವೆ ಸಂಖ್ಯೆ 119/2021

ಪಿ.ಡಬ್ಲ್ಯೂ.01

ಸಾಕ್ಷಿಗೆ ಇಂದು ದಿನಾಂಕ 06-12-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಕೀಲರಿಂದ

ನನ್ನ ತಾಯಿಯ ತವರು ಮನೆ ವಜ್ಜರ ಮಟ್ಟಿ ನಾನು ಇಂಗಳಗಿಯಲ್ಲಿ ಇರುತ್ತೇನೆ 1 ನೇ ವಾದಿ ಮುಧೊಳನಲ್ಲಿ ಇರುತ್ತಾರೆ, 3 ನೇ ವಾದಿ ನನ್ನ ಜೊತೆ ಇರುತ್ತಾರೆ. ನಾನು 30 ವರ್ಷಗಳಿಂದ ಇಂಗಳಗಿಯ ಇರುತ್ತೇನೆ. ನಾನು ಸಿದ್ದಪ್ಪ ಬಸಪ್ಪ ಕಲ್ಯಾಣಿ ರವರ ವಾರಸುದಾರರು ಎಂದು ತೋರಿಸಲು ದಾಖಲೆಗಳು ಇರುತ್ತವೆ ಅವುಗಳನ್ನು ವಕೀಲರ ಕಡೆ ಕೋಟ್ಟಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಉತ್ತರ ಜೀವಿತ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. 2021 ರಲ್ಲಿ ಉತ್ತರ ಜೀವಿತ ಪ್ರಮಾಣ ಪತ್ರವನ್ನು ತಹಶಿಲ್ದಾರ ರವರ ಕಡೆಯಿಂದ ಪಡೆದು ಕೋಂಡಿರುತ್ತೇನೆ. ಈ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಉತ್ತರ ಜೀವಿತ ಪ್ರಮಾಣ ಪತ್ರವನ್ನು ತೆಗೆದುಕೊಂಡಿಲ್ಲ ಮರಣ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತೆನೆ ಎಂದು ಹೇಳುತ್ತಾರೆ. ಸಿದ್ದಪ್ಪ ಬಸಪ್ಪ ಕಲ್ಯಾಣಿರವರ ವಾರಸುದಾರರು ನಾವೇ ಎಂದು ತೋರಿಸಲು ದಾಖಲೆಗಳನ್ನು ನನ್ನ ವಕೀಲರ ಬಳಿ ಕೊಟ್ಟಿರುತ್ತೇನೆ. ನಾನು ಸಿದ್ದಪ್ಪ ಬಸಪ್ಪ ಕಲ್ಯಾಣಿ ರವರ ವಾರಸುದಾರರ ಅಲ್ಲ ಎಂದರೆ  ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಎಲ್ಲ ದಾಖಲೆಗಳನ್ನು ನಮ್ಮ ವಕೀಲರರಿಗೆ ಕೊಟ್ಟಿರುತ್ತೇನೆ. ಸಿದ್ದಪ್ಪ ಬಸಪ್ಪ ಕಲ್ಯಾಣಿ ರವರಿಗೂ ದಾವಾ ಆಸ್ತಿಗೂ, ನನಗೂ ಮತ್ತು ಇತರ  ಇಬ್ಬರು ವಾದಿಗಳಿಗೂ ಸಿದ್ದಪ್ಪ ಬಸಪ್ಪ ಕಲ್ಯಾಣಿ ರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.  ದಾವಾ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಎಂದು ತೋರಿಸಲು ನ್ಯಾಯಲಾಯಕ್ಕೆ ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ.

1985 ರಲ್ಲಿ ಪ್ರತಿವಾದಿಗಳ ಮನೆತದಲ್ಲಿ ಪಾಲು ವಾಟ್ನಿ ಆಗಿರುತ್ತದೆ ಎಂದರೆ ಸಾಕ್ಷಿಯು ನಮಗೆ ಹೇಳಲಾಗದೇ ಪಾಲು ವಾಟ್ನಿ ಮಾಡಿ ಕೊಂಡಿರುತ್ತಾರೆ ಎಂದು ಹೇಳುತ್ತಾರೆ.1985 ರಿಂದ ಪ್ರತಿವಾದಿಗಳು ತಮ್ಮ ಪಾಲಿಗೆ ಬಂದಂತಹ ಆಸ್ತಿಗಳನ್ನು

ಅಸಲು ದಾವೆ ಸಂಖ್ಯೆ 119/2021

ಪಿ.ಡಬ್ಲ್ಯೂ.01

ಹಂಚಿಕೋಂಡು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಹಿರಿಯರರಿಂದ ಬಂದಂತಹ ಆಸ್ತಿಗಳನ್ನು ಹಂಚಿ ಕೊಂಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ ನಂ.4 ರವರು ಯಾದವಾಡದ ಗುರು ನೀಲಕಂಠ ಪದವಿ ಪೂರ್ವ ಕಾಲೇಜನಲ್ಲಿ ಶಿಕ್ಷಕರಾಗಿ 1982 ರಂದು ಕೇಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಪ್ರತಿ ತಿಂಗಳು 75,000/- ರೂ ಸಂಬಳ ಪಡೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.741/1 ರಲ್ಲಿ ರುವ ಆಸ್ತಿಯನ್ನು ಪ್ರತಿವಾದಿ 1 ರವರು ಮಲ್ಲಿಕಾರ್ಜುನ ರವರಿಂದ 1,37,000/- ರೂ.ಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದೇ ರೀತಿ ಸರ್ವೆ 864/3 ರಲ್ಲಿ 10 ಗುಂಟೆ ಆಸ್ತಿಯನುಖ್ನ ಸೈದು ಸಾಬ ತಹಶೀಲ್ದಾರವರಿಂದ ಪ್ರತಿವಾದಿ 2 ಮತ್ತು 4 ರವರು ಜಂಟಿ ಆಗಿ ಖರೀದಿಗೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ CTC nm.4026 ಇ /3 ನ್ನು ಪ್ರತಿವಾದಿ 4 ರವರು ಸತೀಶ ತೋರದ ರವರ ಕಡೆಯಿಂದ ದಿನಾಂಕ 29-10-2020 ರಂದು ಖರೀದಿ ಮಾಡಿಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವೆಲ್ಲ ನಮ್ಮ ತಂದೆಯಿಂದ ಬಳುಬಳಿಂದ ಬಂದಂತಹ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಈ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣೆ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ